ಕೆ.ಸಿ.ಡಿ. ಸಮಾಚಾರ
ಬದುಕಿನ ಹಾದಿಯಲ್ಲಿ ಬರವಣಿಗೆಯ ತೋರಣ
ಶಿಕ್ಷಣ-ಸಂಸ್ಕೃತಿ-ಸಮಾಜ ನಮ್ಮ ಧ್ಯೇಯ, ನಿಷ್ಠೆ
KCD JOURNALISM CLUB DHARWAD
ಕರ್ನಾಟಕ ಮಹಾವಿದ್ಯಾಲಯ ಧಾರವಾಡ
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ
100 Years Centenary Celebration 2017-18 KARNATAK COLLEGE DHARWAD

ಕರ್ನಾಟಕ ಕಾಲೇಜು ಧಾರವಾಡ. ಬಿ.ಎ. ಪತ್ರಿಕೋದ್ಯಮ ವಿದ್ಯಾರ್ಥಿಗಳ ವಾರ ಪತ್ರಿಕೆ. ಸಂಚಿಕೆ:17 ಸಂಪುಟ:3 ಪುಟ:2

@KACD100 @Ksamachar Kcdsamachara@gmail.com Readers can view at Kcd2017.blogspot.in

## ಬೆಳಕು

ಸ್ವಾತಂತ್ರ್ಯವೆಂದರೆ
ದೇಶಪ್ರೇಮ, ಹಕ್ಕು,
ಕರ್ತವ್ಯ, ಜವಬ್ದಾರಿ
ಇತ್ಯಾದಿಗಳೆಲ್ಲ ಏಕಕಾಲಕ್ಕೆ
ಅನುಷ್ಠಾನಗೊಳ್ಳಬೇಕಾದ
ಪ್ರಕ್ರಿಯೆ. ಸ್ವಾತಂತ್ರ್ಯದ
ಸಂತಸ ನಿರಂತರವಾಗಿರಲಿ.

–ಅನಾಮಿಕ

## Unbelievable facts.



India's Taj Mahal Hotel has become India's first building to get a Trademark. This Palace is now as important as Eiffel Tower, Empire Estate and Sydney Opera House. Building is 114 Years old and was a hospital. A Very big achievement of India. One more thing added to Proud of India.

## 'ನಗೆ ಹೊನಲು'

ಪುಕ್ಕಟೆ ನೋಬಾಲ್ ಕೊಡೊಕಾಗಲ್ಲಪ್ಪ,
ಅರ್ಧಾಂಶ ಹಣ ಇತ್ತ ತಳ್ಳು!



# ಕೆಸಿಡಿಯಲ್ಲಿ 71ನೇಯ ಸ್ವಾತಂತ್ರ್ಯ ದಿನಾಚರಣೆಯ ಸಂಭ್ರಮೋತ್ಸವ

ತನು ಮನ ಧನಗಳಿಂದ ತ್ಯಾಗ ಬಲಿದಾನಗಳ ಮೂಲಕ ಭಾರತದ ಸ್ವತಂತ್ರಕ್ಕಾಗಿ ದುಡಿದ ಮಹಿನೀಯರನ್ನು ನೆನೆಯುವದು ನಮ್ಮ ಆದ್ಯ ಕರ್ತವ್ಯ ಎಂದು ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಎಂದು ಹೇಳದರು. ಅವರು ಕರ್ನಾಟಕ ಕಲಾ ಮಹಾವಿದ್ಯಾಲಯದ ಕೆಂಪು ಮುಖ್ಯ ಕಟ್ಟಡದ ಮುಂದೆ ಧ್ವಜವಂದನೆ ನೆರೆವೇರಿಸಿ ಮಾತನಾಡುತ್ತಿದ್ದರು.

ಭಾರತದ ಸ್ವತಂತ್ರ ಸಂಗ್ರಾಮದಲ್ಲಿ ಮಹಾತ್ಮಾ ಗಾಂಧೀಜಿ, ಭಗತ್ ಸಿಂಗ್, ಝಾನ್ಸಿರಾಣಿ ಲಕ್ಷ್ಮಿಬಾಯಿ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಸೇ–ರಿದಂತೆ ಅನೇಕ ಮಹಾನ ನಾಯಕರ ಒಗ್ಗಟ್ಟಿನ ಹೋರಾಟದಿಂದ ಬ್ರಿಟೀಷ–ರಿಂದ ಸ್ವಾತಂತ್ರ್ಯ ಸಿಕ್ಕಿದ್ದು ಇತಿಹಾಸ ಸದ್ಯದ ಪರಿಸ್ಥಿತಿಯಲ್ಲಿ ದೇಶವು ಭಯೋತ್ಪಾದನೆ, ಆಂತರಿಕ ಘರ್ಷಣೆ ಮತ್ತು ನೆರೆಯ ರಾಷ್ಟ್ರಗಳ ಆಕ್ರಮಣದ ಭೀತಿಯಂತಹ ಸಮಸ್ಯೆಗಳ ಮಧ್ಯದಲ್ಲಿ ನಾವು ದೇಶದ ಕುರಿತು ಚಿಂತಿಸಬೇಕಾಗಿದೆ ಆದ್ದರಿಂದ ಇಂದು ನಮ್ಮೆಲ್ಲರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂದರು. ಸ್ವತಂತ್ರ ಸಂಗ್ರಾಮದಲ್ಲಿ ಕರ್ನಾಟಕದ ಸಣ್ಣ ಪ್ರಾಂತ್ಯದ ಕಿತ್ತೂರಿನ ರಾಣಿ ಚನ್ನಮ್ಮ ಬ್ರಿಟೀಷರ್ ವಿರುದ್ಧ ಹೋರಾಡಿದ ಮೊದಲ ಹೋರಾಟಗಾರ್ತಿಯಾಗಿ ನಮಗೆಲ್ಲ ಸ್ಪೂರ್ತಿಯಾಗಿದ್ದಾಳೆ ಎಂದರು.



ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಅವರು ಕೆಸಿಡಿಯ ಕೆಂಪು ಬಣ್ಣದ ಮುಖ್ಯ ಕಟ್ಟಡದ ಮುಂದೆ ಧ್ವಜವಂದನೆ ನೇರವೆರಿಸುತ್ತಿರವದು. ಚಿತ್ರದಲ್ಲಿ ಎನ್‌ಸಿಸಿ ಮತ್ತು ಎನ್ ಎಸ್ ಎಸ್ ಅಧಿಕಾರಿಗಳು ಕೆಡೆಟ್‌ಗಳು ವಿದ್ಯಾರ್ಥಿಗಳು ಶಿಕ್ಷಕರು ಹಾಜರಿದ್ದರು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ್ದು, ಅದನ್ನು ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ ಎಂದ ಅವರು ಕರ್ನಾಟಕ ಕಲಾ ಮಹಾವಿದ್ಯಾಲಯವು ಕೇಂದ್ರ ಸರಕಾರದ ಸ್ವಚ್ಛತಾ ಪಾಕ್ಷಿಕ–ಎಂಬ ಸ್ವಚ್ಛತಾ ಆಂದೋಲನದ ಪ್ರಯುಕ್ತ ವಿದ್ಯಾರ್ಥಿ ಮತ್ತು ಶಿಕ್ಷಕರ ಸಹಕಾರದಿಂದ ಅವಿರತವಾಗಿ 15 ದಿನಗಳ ಒಂದು ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡು ಕೆಸಿಡಿ ಕ್ಯಾಂಪಸ್‌ನ್ನು ಸ್ವಚ್ಛ ಗೊಳಿಸಿದ್ದು, ಈ ಸಂದರ್ಭದಲ್ಲಿ ನಾನು 'ಕ್ಲೀನ್ ಕ್ಯಾಂಪಸ್' ಎಂದು ಘೋಷಿಸಿತ್ತನೆ ಎಂದು ಘೋಷಿಸಿದರು. ಕರ್ನಾಟಕ ಕಲಾ ಮಹಾವಿದ್ಯಾಲಯದ ಎನ್.ಸಿ.ಸಿ. ಮತ್ತು ಎನ್ ಎಸ್ ಎಸ್ ಅಧಿಕಾ–ರಿಗಳು , ಎನ್ ಸಿಸಿ ಕೆಡೆಟ್‌ಗಳು ಎನ್ ಎಸ್ ಎಸ್ ಸ್ವಯಂ ಸೇವಕರು ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ ಸೇ–ರಿದಂತೆ ವಿದ್ಯಾರ್ಥಿಗಳು ಹಾಜರಿದ್ದರು.

### ' ಸ್ವಚ್ಛತಾ ಪಖವಾರ್' ಬೃಹತ್ ರ್‍ಯಾಲಿಗೆ ಚಾಲನೆ

# ಪರಿಸರದ ಸ್ವಚ್ಛತೆ ನಮ್ಮೆಲ್ಲರ ಜವಬ್ದಾರಿ: ಪ್ರೊ. ಪ್ರಮೋದ ಗಾಯಿ

ನಮ್ಮ ಸುತ್ತಮುತ್ತಲಿನ ಪರಿಸರ ಪರಿಸರವು ಸ್ವಚ್ಛವಾಗಿದ್ದರೆ, ನಮ್ಮ ಮನಸ್ಸು ಮತ್ತು ಆರೋಗ್ಯವು ಕೂಡ ಸ್ವಚ್ಛವಾಗಿರುತ್ತದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿ ಹೇಳಿದರು. ಅವರು ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಕರ್ನಾಟಕ ಕಲಾ ಮಹಾವಿದ್ಯಾಲಯದ ಮೈದಾನದಲ್ಲಿ 70ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಅಂಗವಾಗಿ ಭಾರತ ಸರಕಾರದ ನಿರ್ದೇಶನದಂತೆ ' ಸ್ವಚ್ಛತಾ ಪಖವಾರ್' ಎಂಬ 15 ದಿನಗಳ ಸ್ವಚ್ಛತಾ ಆಂದೋಲನದ ಅಂಗವಾಗಿ ಆಯೋಜಿಸಿದ ಬೃಹತ್ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಇಂದು ಸಮಾಜದಲ್ಲಿ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿರುವ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರ ಪಾತ್ರ ಮಹತ್ವದಾಗಿದ್ದು, ನಾವು ವಾಸಿಸುವ ಪ್ರದೇಶವನ್ನು ಶುಚಿಯಾಗಿ ಇಟ್ಟುಕೊಳ್ಳಲು ಜನರಿಗೆ ತಿಳುವಳಿಕೆ ಮೂಲಕ ಅವರಿಗೆ ಜಾಗೃತಿಯನ್ನು ಮೂಡಿಸಬೇಕಾದ ಅವಶ್ಯಕತೆ ಇದೆ ಆದ್ದರಿಂದ ನಾವೆಲ್ಲರೂ ನಮ್ಮ ಕಾಲೇಜಿನ ಆವರಣ ಮತ್ತು ನಾವು ವಾಸಿಸುವ ಸ್ಥಳದ ಸುತ್ತಮುತ್ತಲಿನ ಪ್ರದೇಶವನ್ನು ಸ್ವಚ್ಛವಾಗಿ ಇಡುವುದರ ಮೂಲಕ ಇನ್ನೊಬ್ಬರಿಗೆ ಮಾದರಿಯಾಗಿಬೇಕಿದೆ ಎಂದ ಅವರು ನಮ್ಮ ಜೀವನದಲ್ಲಿ ಸ್ವಚ್ಛತೆಯ ಕುರಿತು ತತ್ವಗಳನ್ನು ಜೀವನ ಪರ್ಯಂತ ರೂಢಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸಂಂ–ಯೋಜನಾಧಿಕಾರಿಗಳಾದ ಡಾ ಎಂ ಬಿ ದಳಪತಿ ಮಾತನಾಡಿ ಇದು ಭಾರತ ಸರಕಾರದ ಸ್ವಚ್ಛ ಭಾರತದ ಯೋಜನೆಯ ಅಡಿಯಲ್ಲಿ 'ಸ್ವಚ್ಛತಾ ಪಖವಾರ' ಎಂಬ ಕಾರ್ಯಕ್ರಮವನ್ನು ದೇಶಾದ್ಯಂತ ಎಲ್ಲ ಶಾಲಾ ಕಾಲೇಜುಗಳಲ್ಲಿ ಆಯೋಜಿಸಲು ನಿರ್ದೇಶನ ನೀಡಿದ್ದು, ಕೇಂದ್ರ ಸರಕಾರದ ಈ ನಿರ್ದೇಶನದಂತೆ ಆಗಸ್ಟ್ 1 ರಿಂದ 15 ರ ವರೆಗೆ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸವುದರ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡುವ ನಿಟ್ಟಿನಲ್ಲಿ ಈ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸ್ವಚ್ಚತಾ ಆಂದೋಲನದ ಪ್ರಯುಕ್ತ ಹಮ್ಮಿಕೂಂಡ ಈ ರ್‍ಯಾಲಿಯಲ್ಲಿ ಧಾರವಾಡ ಶಹರದ 19 ಕಾಲೇಜುಗಳ 1000 ಕಿಂತ ಹೆಚ್ಚು ಎನ್ ಎಸ್ ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು. ಈ ರ್‍ಯಾಲಿಯು ಕರ್ನಾಟಕ ಕಲಾ ಮಹಾವಿದ್ಯಾಲಯದಿಂದ ಪ್ರಾರಂಭಗೂಂಡು ಜುಬಲಿ ಸರ್ಕಲ್, ಸುಭಾಷ್ ರೋಡ್, ಕೆಸಿಸಿ ಬ್ಯಾಂಕ್ ಮತ್ತು ಜಕಣಿ ಬಾವಿ ರಸ್ತೆ ಮೂಲಕ ಕಲಾ ಭವನದಲ್ಲಿ ಕೊನೆಗೊಂಡಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ಸಿ.ಎಫ್ ಮೂಲಿಮನಿ ಪ್ರಾಧ್ಯಾಪಕರಾದ ಡಾ ಯರಿಸ್ವಾಮಿ, ಡಾ ರಾಜಪ್ಪ, ಡಾ ಝಾಕೀರ್ ಗುಳಗುಂಡಿ ಸೇರಿದಂತೆ ಧಾರವಾಡದ ವಿವಿಧ ಮಹಾವಿದ್ಯಾಲಯಗ ಎನ್ ಎಸ್ ಎಸ್ ಅಧಿಕಾರಿಗಳು ಮತ್ತು ಸ್ವಯಂ ಸೇವಕರು ಈ ರ್‍ಯಾಲಿಯಲ್ಲಿ ಭಾಗವಹಿಸದ್ದರು ಕಾರ್ಯಕ್ರಮವನ್ನು ಡಾ ಬಿ.ಎಸ್ ಭಜಂತ್ರಿ ನಿರೂಪಿಸಿದರು.




ಕರ್ನಾಟಕ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶವು ಸ್ವಚ್ಛತಾ ಪಖವಾರ್' ಎಂಬ ಪಾಕ್ಷಿಕ 15 ದಿನಗಳ ಸ್ವಚ್ಛತಾ ಆಂದೋಲನದ ಅಂಗವಾಗಿ ಆಯೋಜಿಸಿದ ಬೃಹತ್ ರ್‍ಯಾಲಿಯನ್ನು ಕುಲಪತಿ ಪ್ರಮೋದ ಗಾಯಿ ಹಸಿರು ನಿಶಾನೆ ತೋರಿಸುವ ಮೂಲಕ ಉದ್ಘಾಟಿಸುತ್ತಿರುವದು



ಈ ಸ್ವಚ್ಛತಾ ಆಂದೋಲನದ ಅಂಗವಾಗಿ ಆಯೋಜಿಸಿದ ಬೃಹತ್ ರ್‍ಯಾಲಿಯಲ್ಲಿ ಧಾರವಾಡ ವಿವಿಧ ಕಾಲೇಜುಗಳಿಂದ ಆಗಮಿಸಿದ ಎನ್ ಎಸ್ ಎಸ್ ಸ್ವಯಂ ಸೇವಕರು ಭಾಗವಹಿಸಿದ್ದರು.

# ಕರ್ನಾಟಕ ಕಲಾ ಮಹಾವಿದ್ಯಾಲಯದ ಶತಮಾನೋತ್ಸವದ ವಿಶೇಷ ಲಾಂಛನ ಬಿಡುಗಡೆ ಕ.ವಿ.ವಿ ಕುಲಪತಿ ಪ್ರೊ. ಪ್ರಮೋದ ಗಾಯಿ ಅವರಿಂದ ಲೋಕಾರ್ಪಣೆ

**ಕರ್ನಾಟಕ ಕಲಾ ಮಹಾವಿದ್ಯಾಲಯದ ಸಂಭ್ರಮೋತ್ಸವದ ಆಚರಣೆಯ ನಿಮಿತ್ಯವಾಗಿ ವಿಶೇಷವಾದ ಲಾಂಛನವನ್ನು ಬಿಡುಗಡೆ ಮಾಡಲಾಗಿದೆ. ಈ ಲಾಂಛನವು ಕರ್ನಾಟಕ ಕಾಲೇಜಿನ ಕೆಂಪು ಕಟ್ಟಡವು ಹೊಂದಿದ್ದು, ಈ ಲಾಂಛನದಲ್ಲಿ 'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ' ಎಂಬ ಧೇಯ ವಾಕ್ಯವನ್ನು ಹೊಂದಿದೆ. ಕರ್ನಾಟಕ ಕಾಲೇಜು 1917ರಲ್ಲಿ ಪ್ರಾರಂಭವಾಗಿದ್ದು ಸದ್ಯ ಈಗ 2017 ಕ್ಕೆ ಶತಮಾನೋತ್ಸದ ವರ್ಷಾಚರಣೆಯನ್ನು ಆಚರಿಸುತ್ತಿದೆ.**







ಕರ್ನಾಟಕ ಕಲಾ ಮಹಾವಿದ್ಯಲಯದಲ್ಲಿ ಕರ್ನಾಟಕ ಸಂಘದ ಕಾರ್ಯಕ್ರಮದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕುಲಪತಿಗಳಾದ ಪ್ರೊ.ಪ್ರಮೋದ ಗಾಯಿ ಅವರು ಕರ್ನಾಟಕ ಕಾಲೇಜಿನ ಶತಮಾನೋತ್ಸವದ ಸಂಭ್ರಮ ಆಚರಣೆಯ ಪ್ರಯುಕ್ತ ವಿಶೇಷ ಲಾಂಛನ(ಲೋಗೋ) ಬಿಡುಗಡೆ ಮಾಡಿದರು. ಸಂಯುಕ್ತ ಕರ್ನಾಟಕ ಪತ್ರಿಕೆಯ ವವ್ಯಸ್ಥಾಪಕರಾದ ಸಿ.ಆರ್.ರಾಮ್ ನಾಯ್ಕ್,ಡಾ.ವಾಮ್ದೇವ್ ತಳವಾರ, ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ರಾಜೇಶ್ವರಿ ಮಹೇಶ್ಚರಯ್ಯ, ಡಾ.ಬಿಎಸ.ಭಜಂತ್ರಿ, ಡಾ.ಶರಣು ಮುಷ್ಠಿಗೇರಿ ಚಿತ್ರದಲ್ಲಿ ಇದ್ದಾರೆ.

## ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಗಣೇಶ ಚತುರ್ಥಿ ಆಚರಣೆ

ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ವಿಘ್ನಹರ ಶ್ರೀ ಗಣೇಶನ ಶುಕ್ರವಾರದಂದು ಪ್ರತಿಷ್ಠಾಪಿಸಲಾಯಿತು. ಈ ಸಂದರ್ಭದಲ್ಲಿ ಕಲಬುರ್ಗಿಯ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ. ಹೆಚ್ ಎಂ ಮಹೇಶ್ವರಯ್ಯ ಭಾಗವಹಿಸಿದ್ದರು. ಈ ವೇಳೆಯಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ ರಾಜೇಶ್ವರಿ ಮಹೇಶ್ವರಯ್ಯ ಮತ್ತು ಕಲಬುರ್ಗಿಯ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಹೆಚ್ ಎಂ ಮಹೇಶ್ವರಯ್ಯ ಅವರು ಗಣೇಶ್ ಚಥುರ್ತಿ ಪ್ರಯುಕ್ತ ಎಲ್ಲ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿದರು. ಈ ವೇಳೆ ಕಾಲೇಜಿನ ಪ್ರಾಧ್ಯಾಪಕರಾದ ಡಾ ಮಹದೇವಯ್ಯ ಡಾ ರಾಮನಗೌಡ ಪಾಟೀಲ್. ಡಾ .ವಿ.ಪಿ.ಸುಣಗಾರ ಡಾ. ಪ್ರಭಾಕರ ಕಾಂಬಳೆ ಕಾಲೇಜಿನ ವೈದ್ಯರಾದ ಡಾ ಎಲೇದಹಳ್ಳಿ ಕಚೇರಿಯ ಅಧೀಕ್ಷಕರಾದ ಸುಭಾಶ ಮಡಿಗಾರ, ಆರ್ ಎಂ ಸವಣೂರ ಶ್ರೀ ವಿಜಯಕುಮಾರ ತಿಬೇಲಿ ಇತರರು ಹಾಜರಿದ್ದರು. ಈ ಗಣೇಶ್ ಚತುರ್ಥಿಯ ಆಚ-ರಣೆಯ ಪ್ರಯುಕ್ತ ಶನಿವಾರದಂದು ಅನ್ನ ಸಂತರ್ಪಣೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ವಿಜ್ಞಾನ ಮತ್ತು ಕಲಾ ಮಹಾವಿದ್ಯಾಲಯಗಳ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಕಲಬುರ್ಗಿಯ ಕೇಂದಿಯ ವಿಶ್ವವಿದ್ಯಾಲಯದ ಕುಲಪತಿ ಡಾ ಹೆಚ್ ಎಂ ಮಹೇಶ್ವರಯ್ಯ ಡಾ ರಾಜೇಶ್ವರಿ ಮಹೇಶ್ವರಯ್ಯ ಡಾ ಎಲೇದಹಳ್ಳಿ, ವಿಜಯಕುಮಾರ ತಿಬೇಲಿ, ಡಾ ವಿ.ಪಿ ಸುಣಗಾರ, ಅಧೀಕ್ಷಕರಾದ ಆರ್ ಎಂ ಸವಣೂರ ಮತ್ತು ಸುಭಾಶ ಮಡಿಗಾರ್ ಚಿತ್ರದಲ್ಲಿ ಇದ್ದಾರೆ.

## ಜಾರ್ಜಾ ಬರ್ನಾಡ್ ಷಾ ಕುರಿತು ವಿಶೇಷ ಉಪನ್ಯಾಸ




ಪ್ರೊ.ಬಿ.ಎಸ್. ಉಗ್ರದ

ದಿನಾಂಕ 18/08/2017 ರಿಂದ ರಂದುಇಂಗ್ಲೀಷ್ ಸ್ಟಡಿ ಸರ್ಕಲ್ ವತಿಯಿಂದ ಜಾರ್ಜ್ ಬರ್ನಾಡ್ ಷಾ ರವರ 161 ನೇ ಜನ್ಮ ದಿನಾಚರಣೆ ಯ ಅಂಗವಾಗಿ Life and thoughts of Barnad Shah ಎಂಬ ವಿಶೇಷ ಉಪನ್ಯಾಸವನ್ನು ಏರ್ಪಡಿಸಿತ್ತು. ಲಕ್ಷೇಶ್ವರ ಮುನಿಸಿಪಲ್ ಆರ್ಟ್ಸ ಕಾಲೇಜಿನ ಇಂಗ್ಲೀಷ್ ಪ್ರಾಧ್ಯಾಪಕರಾದ ಪ್ರೊ.ಬಿ.ಎಸ್. ಉಗ್ರದ ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಇವರನ್ನು ಸ್ಟಡಿ ಸರ್ಕಲ್ನ ಚೇರ್ ಪರ್ಸನ್ ಚನ್ನ ಬಸಪ್ಪ ಐನಳ್ಳಿ ಸಭೆಗೆ ಸ್ವಾಗತಿಸಿದರು. ಉಗ್ರದ್ ರವರು ಒಂದು ತಾಸಿನ ಕಾಲ ಬರ್ನಾಡ್ ಷಾ ರವರ ಜೀವನದ ವಿಚಾರಧಾರೆಗಳನ್ನು ವಿವರವಾಗಿತಿಳಿಸಿ ವಿದ್ಯಾಥಿಗಳನ್ನು ಮಂತ್ರ ಮುಗ್ದಗೊಳಿಸಿದರು. ವಿದ್ಯಾರ್ಥಿಕಾರ್ಯದರ್ಶಿ ರೋಹಿನಿ ವಂದನೆ ಸಲ್ಲಿಸಿದರು.

## ಇಂಗ್ಲೀಷ್ ಭಾಷಾಜ್ಞಾನದಿಂದ ಜಾಗತಿಕ ಮಟ್ಟದಲ್ಲಿ ಉದ್ಯೋಗ ಅವಕಾಶಗಳು ಹೆಚ್ಚು:ಡಾ.ಆರ್.ಜಿ.ಹೆಗಡೆ

ಇಂಗ್ಲೀಷ ಭಾಷೆಯಲ್ಲಿ ನೈಪುಣ್ಯತೆ ಹೊಂದುವುದರಿಂದ ಜಾಗತಿಕ ಮಟ್ಟದಲ್ಲಿ ಉದ್ಯೋಗ ಅವಕಾಶಗಳು ಹೆಚ್ಚುತ್ತವೆ. ಎಂದು ಪ್ರೊ. ಆರ್ ಜಿ ಹೆಗಡೆ ಅಭಿಪ್ರಾಯಪಟ್ಟರು. ಅವರು ಕರ್ನಾಟಕ ಕಾಲೇಜಿನ ಇಂಗ್ಲೀಷ್ ವಿಭಾಗವು ಆಯೋಜಿಸಿದ 2017–18ನೇ ಸಾಲಿನ ಇಂಗ್ಲೀಷ್ ಸ್ಟಡಿ ಸರ್ಕಲ್ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗೆ ಚಾಲನೆ ನೀಡಿ ಮಾತನಾಡುತ್ತಿದ್ದರು. ಇಂದು ಇಂಗ್ಲೀಷ್ ಸಾಹಿತ್ಯ ಅಧ್ಯಯನ ಮಾಡಿದವರಿಗೆ ಖಾಸಗಿವಲಯದಲ್ಲಿ ಹೆಚ್ಚು ಅವಕಾಶಗಳಿಗದ್ದು, ಅವುಗಳನ್ನು ಪಡೆಯಬೇಕಾದರೆ ನಾವು ಇಂಗ್ಲೀಷ್ ಸಾಹಿತ್ಯ ಮತ್ತು ಭಾಷೆಯಲ್ಲಿ ಆಳ ಅಧ್ಯಯನ ಮಾಡುವ ಅವಶ್ಯಕತೆ ಇದೆ ಎಂದರು ಇಂದು ಭಾರತದಂತಹ ಅನೇಕ ಮಹಾನಗರಗಳಲ್ಲಿ ಇಂಗ್ಲೀಷ್ ಭಾಷೆಯು ಉದ್ಯೋಗ ಆಕಾಂಕ್ಷಿಗಳಿಗೆ ಇಂಗ್ಲೀಷ ಭಾಷಾ ಕೌಶಲ್ಯ ಮತ್ತು ಜ್ಞಾನದ ಅವಶಕ್ಯಕತೆ ಇದೆ ಎಂದರು, ಸ್ಟಡಿ ಸರ್ಕಲ್‌ನ ಅಧ್ಯಕ್ಷರಾದ ಚನ್ನಬಸಪ್ಪ ಐನಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ ಇಂಗ್ಲೀಷ್ ವಿಭಾಗದ ಸ್ಟಡಿ ಸರ್ಕಲ್‌ದಿಂದ ಅನೇಕ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಮ್ಮಿಕೊಳ್ಳಲಾಗುವದು ಆದ್ದರಿಂದ ಎಲ್ಲ ವಿದ್ಯಾರ್ಥಿಗಳು ಸದುಪಯೋಗ ಪಡೆದುಕೋಳ್ಳಬೇಕು ಎಂದರು. ಈ ವೇಳೆಯಲ್ಲಿ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿ ತರಗತಿಯ ಐಚ್ಛಿಕ ಇಂಗ್ಲೀಷ್ ನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯನ್ನು ಮಾಡಲಾಯಿತು. ಡಾ.ಆರ್.ಜಿ.ಹೆಗ್ಡೆ ಮೂರು ವರ್ಷದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿದರು. ನಂತರ NET & KSET ಪರೀಕ್ಷೆಗಳಲ್ಲಿ ಇಂಗ್ಲೀಷ್ ವಿಷಯದಲ್ಲಿ ಉನ್ನತ ರ್‍ಯಾಂಕ್ ನೊಂದಿಗೆ ಸಾಧನೆಗೈದ ಕಾಲೇಜಿನ ನಾಲ್ವರು ಹಳೆಯ ವಿದ್ಯಾರ್ಥಿಗಳಾದ ಪ್ರವೀಣ ಕೊರ್ಲಹಳ್ಳಿ ಚೈತ್ರ ನಾಗಮ್ಮನವರ, ಅಕ್ಷಯ ಯಾರ್ದಿ ಮತ್ತು ಇಮ್ರಾನ್ ಮುಲ್ಲಾ ಇವರಿಗೆ ಸ್ಟಡಿ ಸರ್ಕಲ್ ವತಿಯಿಂದ ಸನ್ಮಾನ ಮಾಡಲಾಯಿತು. ಮೊದಲ ವರ್ಷದ ವಿದ್ಯಾರ್ಥಿಗಳಾದ ಗೌರಿ ಸಜ್ಜನವರ್ & ಐರಿನ್ ಖುರೇಷಿ ಹಿರಿಯ ವಿದ್ಯಾರ್ಥಿಗಳ ಶುಭ ಹಾರೈಕೆಗೆ ಸ್ಪಂದಿಸಿ ಕಾಲೇಜಿನ ತಮ್ಮ ಹೊಸ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಭಾಗದ ಮುಖ್ಯಸ್ಥರದ ಡಾ ಮುಕುಂದ ಲಮಾಣಿ ವಹಿಸದ್ದರು, ಕಾರ್ಯಕ್ರಮದಲ್ಲಿ ಇಂಗ್ಲೀಷ್ ವಿಭಾಗದ ಶಿಕ್ಷಕ ವೃಂದವು ಹಾಜರಿದ್ದರು. ಕಾರ್ಯಕ್ರಮವನ್ನು ಅಂಕಿತಾ ಕುಲಕರ್ಣಿ ಮತ್ತು ಪೂಜಾ ಕುಲಕರ್ಣಿ ನಿರೂಪಿಸದರು. ಸ್ಟಡಿ ಸರ್ಕಲ್‌ನ ಕಾರ್ಯದರ್ಶಿ ಪವನ್ ವಂದಿಸಿದರು.




NET & KSET ಪರೀಕ್ಷೆಗಳಲ್ಲಿ ಇಂಗ್ಲೀಷ್ ವಿಷಯದಲ್ಲಿ ಉನ್ನತ ರ್‍ಯಾಂಕ್ ನೊಂದಿಗೆ ಸಾಧನೆಗೈದ ಕಾಲೇಜಿನ ನಾಲ್ವರು ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಡಾ. ಸುಬ್ರಮಣ್ಯ ಭಟ್ಟ, ಕಾರ್ಯದರ್ಶಿ ರೋಹಿಣಿ ರುದ್ರಣ್ಣ, ಡಾ.ಜೋನ್ ಮಾಡ್ತಾ, ಡಾ ಮುಕುಂದ ಲಮಾಣಿ ಡಾ ಆರ್.ಜಿ ಹೆಗಡೆ, ವಿರೇಂದ್ರ ಯಾದವ, ಚನ್ನಬಸಪ್ಪ ಐನಳ್ಳಿ, ಡಾ. ಸುಕನ್ಯಾ ಜಾಲಿಹಾಳ ಡಾ. ವಿಭಾವರಿ ಕುಲಕರ್ಣಿ, ಡಾ. ಸ್ಟೆಲ್ಲಾ ಸ್ಟಿವನ್, ಡಾ. ಕಾಂಚನಾ ಗಾಂವಕರ ಇದ್ದರು. ಸನ್ಮಾನಿತ ವಿದ್ಯಾರ್ಥಿಗಳಾದ ಪ್ರವೀಣ ಕೊರ್ಲಹಳ್ಳಿ ಚೈತ್ರ ನಾಗಮ್ಮನವರ, ಅಕ್ಷಯ ಯಾರ್ದಿ ಮತ್ತು ಇಮ್ರಾನ್ ಮುಲ್ಲಾ (ಕುಳಿತವರು)

ಗೌರವ ಸಂಪಾದಕರು: ಡಾ. ರಾಜೇಶ್ವರಿ ಮಹೇಶ್ವರಯ್ಯ, ಸಂಚಿಕೆ ಸಂಪಾದಕರು: ಡಾ.ಪ್ರಭಾಕರ್ ಕಾಂಬಳೆ, ಡಾ.ರವೀಂದ್ರ ಜಲರೆಡ್ಡಿ, ವಿದ್ಯಾರ್ಥಿ ಸಂಪಾದಕರು: ಚೇತನ್,ನಿತಿನ್. ಪುಟ ವಿನ್ಯಾಸ: ಶ್ರೀಹರಿ.